1942ರಲ್ಲಿ ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಭಾಗವಹಿಸಿ ಮತ್ತು ಸ್ವಾತಂತ್ರ್ಯ ಸಂಗ್ರಾಮದಲ್ಲಿಯೂ ಕೂಡ ಪಾಲ್ಗೊಂಡು ದೇಶಕ್ಕೆ ಕೊಡುಗೆಯನ್ನು ಕೊಟ್ಟಂಥ ಒಬ್ಬ ಹಿರಿಯ ವ್ಯಕ್ತಿಯಾಗಿದ್ದರು. ಮೈಸೂರು ಮಹಾನಗರ ಸಭೆಯ ಅಧ್ಯಕ್ಷರಾಗಿ ಕೆಲಸ ಮಾಡಿದಂಥವರು. ಅಲ್ಲಿ ಯಾವುದೇ ಕಾರ್ಮಿಕ ಸಮಸ್ಯೆಗಳು ಬಂದಾಗ ಕೂಡಲೇ ಸ್ಪಂಧಿಸಿದಂಥ ಒಬ್ಬ ಹಿರಿಯರು. 9ನೇ ವಿಧಾನ ಸಭೆಯಲ್ಲಿ, ಈ ಮನೆಯ ಸದಸ್ಯರಾಗಿ ಕೆಲಸ ಮಾಡಿದಂಥ ಹಿರಿಯರನ್ನು ಕಳೆದುಕೊಂಡಿದ್ದೇವೆ. ಅವರ ಆತ್ಮಕ್ಕೆ ಶಾಂತಿ ಕೋರಿ, ಈ ದುಃಖವನ್ನು ಅವರ ಕುಟುಂಬದವರು ಮತ್ತು ಬಂಧುಗಳು ಸಹಿಸುವಂಥ ಶಕ್ತಿಯನ್ನು ಭಗವಂತ ಕೊಡಲಿ ಎಂದು ಪ್ರಾರ್ಥನೆ ಮಾಡಿ, ತಾವು ತಂದಿರುವ ಸಂತಾಪ ಸೂಚನೆಗೆ, ನನ್ನ ಅನುಮೋದನೆ ಇದೆಯೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಈಗ ಮಾನ್ಯ ಸದಸ್ಯರುಗಳೆಲ್ಲರೂ ಒಂದು ನಿಮಿಷ ಎದ್ದುನಿಂತು ಮೌನವನ್ನಾಚರಿಸಬೇಕೆಂದು ಕೋರುತ್ತೇನೆ.

(ವಿಧಾನ ಸಭೆಯ ಮಾನ್ಯಸದಸ್ಯರುಗಳೆಲ್ಲರೂ ಎದ್ದುನಿಂತು ಒಂದು ನಿಮಿಷ ಮೌನವನ್ನಾಚರಿಸಿದರು)

ಅಧ್ಯಕ್ಷರು : ಈ ಸಭೆ ಅಂಗೀಕರಿಸಿದ ಸಂತಾಪ ಸೂಚನೆಯ ನಿರ್ಣಯದ ಪಟ್ಟಿಯನ್ನು ಮೃತರ ಕುಟುಂಬಕ್ಕೆ ಕಳುಹಿಸಿಕೊಡಲಾಗುವುದು.

2. ಅಧ್ಯಕ್ಷರ ಅಪ್ಪಣೆ ಮೇರೆಗೆ

1) ಸಿಇಟಿಯ ಮುರಗೋಡು ಫೀ ಸ್ಟ್ರಕ್ಚರ್ ಬಗ್ಗೆ ಪ್ರೈವೇಟ್ ಮ್ಯಾನೇಜ್‌ಮೆಂಟ್‌ನವರು ಸುಪ್ರೀಮ್ ಕೋರ್ಟಿಗೆ ಹೋಗಿರುವ ಬಗ್ಗೆ

ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ ಒಂದೇ. ಒಂದು ತಮ್ಮಲ್ಲಿ ವಿನಂತಿ. ನಮ್ಮ ಹಿರಿಯ ಸಚಿವರಾದಂಥ ಕಂದಾಯ ಮುಜರಾಯಿ ಸಂಸದೀಯ ಸಚಿವರೂ ಅದಂಥ ಸನ್ಮಾನ್ಯ ಎಂ.ಪಿ. ಪ್ರಕಾಶ್‌ರವರು ಇಲ್ಲಿದ್ದಾರೆ. ನಾವು ಆರನೇ ತಾರೀಖಿಗೆ ಅಧಿವೇಶನ ಮುಗಿಸುತ್ತಾ ಇದ್ದೇವೆ. ಅಷ್ಟರಲ್ಲಿ ಕೆಲವು ಜ್ವಲಂತ ಸಮಸ್ಯೆಗಳಿಗೆ ಪರಿಹಾರ ಹುಡುಕದೇ ಹೋದರೆ, ನಾವೆಲ್ಲಾ 224 ಜನ, ಜನರಿಗೆ ಮುಖ ತೋರಿಸುವುದು ಹೇಗೆ? ಉದಾಹರಣೆಗೆ, ಬೇರೆ ಸಮಯದಲ್ಲಿ ಚರ್ಚೆ ಮಾಡೋಣ. ಈ ಮುರುಗೋಡು ಫೀ ಸ್ಟ್ರಕ್ಚರ್ ಬಗ್ಗೆ, ಪ್ರೈವೇಟ್ ಮ್ಯಾನೇಜ್‌ಮೆಂಟ್‌ನವರು ಸುಪ್ರೀಂ ಕೋರ್ಟಿಗೆ ಈ ಫೀ ಸ್ಟ್ರಕ್ಚರ್ ಸಾಧ್ಯವಿಲ್ಲವೆಂದು ಹೋಗಿದ್ದಾರೆ. ಅಷ್ಟೇ ಅಲ್ಲ, ಅಡ್ಮಿಷನ್ ಸಂದರ್ಭದಲ್ಲಿ ಮಕ್ಕಳಿಂದ ಅಗ್ರಿಮೆಂಟ್ ಬರೆಸಿ ಕೊಂಡು, ನಾಳೆ ಯಾವುದು ವ್ಯತ್ಯಾಸಗಳಾಗುತ್ತೆ, ಆ ದುಡ್ಡನ್ನು ಕೊಡುವುದಕ್ಕೆ ನೀವು ಸಿದ್ಧರಾಗಿರಬೇಕೆಂದು, ಅವರ ಹತ್ತಿರ ಮುಚ್ಚಳಿಕೆ ಬರೆಸಿಕೊಂಡು ಅಡ್ಮಿಷನ್ ಮಾಡಿಕೊಳ್ಳುತ್ತಿದ್ದಾರೆ. ತಾವೇನೋ ಒಂದು ಹೇಳಿದ್ದೀರಿ, ನಾವೂ ಕೂಡ ಒಂದು ಹೇಳಿದ್ದೇವು. ಸುಪ್ರಿಂಕೋರ್ಟ್ ಒಂದು ಹೇಳಿತು. ಮ್ಯಾನೇಜ್‌ಮೆಂಟಿನವರು ಬಗ್ಗದೆ. ಅವರದೇ ಆದ ಧಾಟಿಯಲ್ಲಿ ಮುಂದುವರಿಸಿದ್ದಾರೆ. ಯಾವುದೇ ಸಮಸ್ಯೆಗಳು ಬರಿದಾಗ, ಸರ್ಕಾರದ ಜೊತೆಗೆ ನಾವು ಸ್ಪಂದಿಸಿದ್ದೇವೆ. ಈ ಸಮಸ್ಯೆಗೆ ಪರಿಹಾರ ಹುಡುಕದೇ ಇದ್ದರೆ, ಸನ್ಮಾನ್ಯ ಹಿರಿಯ ಸಚಿವರಾದ ಪ್ರಕಾಶ್‌ರವರೇ, ಖಂಡಿತ ಇವತ್ತು 4–5 ಸಾವಿರ ಸೇರಿರುವ ವಿದ್ಯಾರ್ಥಿ–ವಿದ್ಯಾರ್ಥಿನಿಯರ ಪ್ರಶ್ನೆ ಅಲ್ಲ. ಮುಂದೆಯಾದರೂ ಡಾಕ್ಟರಾಗಬೇಕು, ಇಂಜಿನಿಯರಾಗಬೇಕು ಎಂದು ಕನಸು ಕಾಣುತ್ತಿದ್ದರಲ್ಲ, ಈ ಜನ್ಮದಲ್ಲಿ ಇದು ಸಾಧ್ಯವಿಲ್ಲವೆಂಬ ತೀರ್ಮಾನಕ್ಕೆ ಬಂದು, ಅವರು ಚಿಂತೆ ಮಾಡಿ, ಮಾಡಿ ಆ ತಂದೆ ತಾಯಿಗಳು ಮತ್ತು ಮಕ್ಕಳು ಕುಸಿದು ಹೋಗುತ್ತಿದ್ದಾರೆ. ಪ್ರತಿನಿತ್ಯ ಬರುತ್ತಾ ಇರತಕ್ಕಂಥ

ಲೇಖನ ಮತ್ತೆ ಅವರ ಫೋಟೋಗಳು, ಅಲ್ಲಿ ಅಡ್ಮಿಷನ್‌ನಲ್ಲಿ ಆಗುತ್ತಿರುವಂಥ ಗೊಂದಲ, ಪ್ರೈವೇಟ್ ಮ್ಯಾನೇಜ್‌ಮೆಂಟಿನವರು ಅವರ ಜೊತೆ ಮಾಡುತ್ತಾ ಇರುವಂಥ, ಸೇಡು ತೀರಿಸಿಕೊಳ್ಳುವಂಥ ಒಂದು ವರ್ತನೆ, ಇದಕ್ಕೆ ಏನಾದರೊಂದು ಪರಿಹಾರ ಹುಡುಕುವಂಥ ಪ್ರಯತ್ನ ತಾವು ಮಾಡಬೇಕು. ಎರಡನೆಯದು ಸನ್ಮಾನ್ಯ ಮಾಜಿ ಮುಖ್ಯಮಂತ್ರಿಗಳಾದ ಎಸ್.ಎಂ. ಕೃಷ್ಣರವರು ನಿನ್ನೆ ಸದನಕ್ಕೆ ಬಂದಿದ್ದರು. ಅವರೇನೋ ಒಂದು ಸ್ಟೇಟ್‌ಮೆಂಟ್ ಮಾಡಬಹುದು, ಈ ಒಂದು ಹಿನ್ನೆಲ್ಲೆಯಲ್ಲಿ ಎಂದು ತಿಳಿದುಕೊಂಡಿದ್ದೆ. ನಾನು ಅವರಲ್ಲಿ ವಿನಂತಿ ಮಾಡುತ್ತೇನೆ. ಅವರನ್ನು ನಾಣು ಒತ್ತಾಯ ಮಾಡುವ ಅಧಿಕಾರ ನನಗಿಲ್ಲ. ಸಂಗ್ರಾಮ್‌ಸಿಂಗ್ ಹೇಳಿಕೆ ಹಿನ್ನೆಲ್ಲೆಯಲ್ಲಿ ಸನ್ಮಾನ್ಯ ಮಾಜಿ ಮುಖ್ಯಮಂತ್ರಿಗಳಾದ ಎಸ್.ಎಂ. ಕೃಷ್ಣರವರು ಉತ್ತರ ಕೊಟ್ಟರೆ ಈ ನಾಡಿನ ಜನತೆಯಲ್ಲಿರುವ ಅನೇಕ ಸಂಶಯಗಳಿಂದ ಅವರು ಹೊರಗೆ ಬರುವುದಕ್ಕೆ ಅನುಕೂಲವಾಗುತ್ತದೆ. ಅವರು ಮೌನವಾಗಿದ್ದರೆ, ಈ ಸಂಗ್ರಾಮ್‌ಸಿಂಗ್ ಹೇಲಿದಂಥಾದ್ದು ಮತ್ತು ಇತ್ತೀಚಿನ ದಿನಗಳಲ್ಲಿ ನಾವೇನು ಚರ್ಚೆ ಮಾಡುತ್ತಾ ಇದ್ದೇವೆ, ಇದಕ್ಕೆಲ್ಲಾ ಅವರು ಒಂದುರೀತಿ ಒಪ್ಪಿಗೆ ಕೊಟ್ಟಹಾಗೆ ಆಗುತ್ತದೆ. ಅವರು ಸದನಕ್ಕೆ ಬಂದಮೇಲೆಯೇ ನಾನು ಪ್ರಸ್ತಾಪ ಮಾಡುತ್ತೇನೆ, ಅವರ ಆಬ್‌ಸೆನ್ಸ್‌ನಲ್ಲಿ ಮಾಡಬೇಕೆಂದು ನನಗೇನಿಲ್ಲ. ನಿನ್ನೆ ಅವರು ಮಾಡುವುದಕ್ಕೆ ಮುಂಚೆ, ನಾನೇ ಒತ್ತಾಯ ಮಾಡಿದೆ ಎಂಬ ಭಾವನೆ ಬರಬಾರದು ಎಂದು ಮಾತನಾಡಿರಲಿಲ್ಲ. ಯಾರಾದರೂ ತಾವೇ ಮಾತನಾಡಿ. ವಾಸ್ತವಿಕ ಸ್ಥಿತಿ ಏನು, ಅವರೇ ಮುಖ್ಯ ಮಂತ್ರಿಯಾಗಿದ್ದ ಕಾಲದಲ್ಲಿ ನಡೆದಂಥ ಈ ಘಟನೆಗಳು, ಅವರ ಜೊತೆಯಲ್ಲಿದ್ದಂಥ ಅಧಿಕಾರಿಗಳು ಇವತ್ತು ಜೈಲಿನಲ್ಲಿರುವಂಥಾದ್ದು, ಇನ್ನು ಅನೇಕ ಜನ ಜೈಲಿಗೆ ಹೋಗುವಂಥ ಸ್ಥಿತಿ ಇರುವಂಥಾದ್ದು, ಅನೇಕ ಸಚಿವರು ಭಾಗಿಯಾಗಿದ್ದಾರೆಂದು ಚರ್ಚೆ ಮಾಡುತ್ತಿರುವ ಈ ಸಂದರ್ಭದಲ್ಲಿ ಸತ್ಯಸಂಗತಿಗಳ ಬಗ್ಗೆ ವಿಶೇಷವಾಗಿ ಕರೀಂಲಾಲಾನ ಹತ್ತಿರ ಹಣ ತೆಗೆದುಕೊಂಡು, ಅವನಿಗೆ ತಲುಪಿಸಿದ್ದೇನೆ ಎಂಬ ವಿಷಯದ ಬಗ್ಗ ಪ್ರಸ್ತಾಪ ಮಾಡುವಂಥಾದ್ದು, ಮಾಹಿತಿ ಕೊಡುವಂಥಾದ್ದು ಅಗತ್ಯವಿದೆ ಎಂದು ಅವರಿಗೆ ಅನಿಸಿದರೆ ಕೊಡಬೇಕು. ಇಲ್ಲದೇ ಇದ್ದರೆ, ಬಹುಶಃ ನಾವೇನು ಚಾರ್ಜಸ್ ಮಾಡಿದ್ದೇವೆ ಅಥವಾ ಇಡೀ ನಾಡಿನ ಜನ ಹಿಂದಿನ ಸರ್ಕಾರದ ಬಗ್ಗೆ ಏನು ಅಪನಂಬಿಕೆ ಇಟ್ಟುಕೊಂಡಿತ್ತು, ಅದನ್ನು ಒಂದುರೀತಿ ಒಪ್ಪಿಕೊಂಡಹಾಗೆ ಆಗುತ್ತೆ. ಅದಕ್ಕೆ ಅವರು ಒಂದು ಸ್ಟೇಟ್‌ಮೆಂಟ್ ಮಾಡಬೇಕೆಂಬ ಒತ್ತಾಯವನ್ನು ಈ ಸಂದರ್ಭದಲ್ಲಿ ಮಾಡುತ್ತೇನೆ.

ಶ್ರೀ ಎಸ್.ಎಸ್. ಪಾಟೀಲ್ : ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಯಡಿಯೂರಪ್ಪನವರು, ಮಾನ್ಯ ಎಸ್.ಎಂ., ಕೃಷ್ಣ ಅವರು ಸ್ಟೇಟ್‌ಮೆಂಟ್ ಕೊಡಬೇಕಾಗಿತ್ತು ಎನ್ನುವ ಮಾತನ್ನು ಹೇಳಿದರು. ಹಿಂದೆ ಜಗದೀಶ್ ಶೆಟ್ಟರು ಮತ್ತು ನಾವು ಆ ಕಡೆ ಕುಳಿತುಕೊಂಡು, ಇದನ್ನೆಲ್ಲಾ ಅಬ್ಜರ್ವ್‌ಷನ್ ಮಾಡಿದಾಗ, ಮುಖ್ಯಮಂತ್ರಿಗಳು ಅದರ ಬಗ್ಗೆ ಸಂಪೂರ್ಣವಾಗಿ ಉತ್ತರ ಕೊಟ್ಟಿದ್ದಾರೆ. ಮುಖ್ಯಮಂತ್ರಿಗಳಾಗಿ, ಈ ಬಗ್ಗೆ ಎಷ್ಟು ದುಡ್ಡು ಕೊಟ್ಟಿದ್ದಿರಿ, ಏನು ಮಾಡಿದಿರಿ ಇದನ್ನೆಲ್ಲಾ ಪ್ರಶ್ನೆ ಹಾಕಿದ್ದೆವು. ಅದರ ಬಗ್ಗೆ ಅವರು, ಅಸೆಂಬ್ಲಿಯಲ್ಲಿ ಮುಖ್ಯಮಂತ್ರಿಗಳಾಗಿ ಉತ್ತರವನ್ನೂ ಕೊಟ್ಟಿದ್ದಾರೆ. ಈ ದೃಷ್ಟಿಯಿಂದ ಇಲ್ಲಿ ನಾನು ಹೇಳಬಯಸುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಮುಜರಾಯಿ ಸಂಸದೀಯ ಸಚಿವರು) : ಸನ್ಮಾನ್ಯ ಅಧ್ಯಕ್ಷರೆ, ವಿರೋಧ ಪಕ್ಷದ ನಾಯಕರು ತಮ್ಮ ಪ್ರಶ್ನೆಯ ಜೊತೆಗೆ ಉತ್ತರವನ್ನೂ ಕೂಡ ಕೊಟ್ಟಿದ್ದಾರೆ. ಒಂದೊಂದು ಸಂದರ್ಭದಲ್ಲಿ ಯಾವ ವ್ಯಕ್ತಿ ಯಾವ ಆಪಾದನೆಗಳನ್ನು ಮಾಡುತ್ತಾನೆ ಎನ್ನುವುದನ್ನು ನಾವು ನೋಡಬೇಕಾಗುತ್ತದೆ. ಆಪಾದಿತನಾಗಿರತಕ್ಕಂಥ ಒಬ್ಬ ವ್ಯಕ್ತಿ, ಆಪಾದನೆಗಳನ್ನು

ಮಾಡಿದಾಗ, ಅದಕ್ಕೆ ಎಷ್ಟು ಬೆಲೆಯನ್ನು ಕೊಡಬೇಕೆಂಬ ವಿಚಾರ ನ್ಯಾಯಾಂಗಕ್ಕೆ ಬಿಟ್ಟಿದ್ದು ಮತ್ತು ಸಾರ್ವಜನಿಕರಿಗೆ ಬಿಟ್ಟಿರತಕ್ಕಂಥಾದ್ದು. ಅದರ ಜೊತೆಗೆ, ಅಂತಹ ಒಬ್ಬ ವ್ಯಕ್ತಿ ಎತ್ತಿರತಕ್ಕಂಥ ಸಮಸ್ಯೆಗಳು ನಿವೃತ್ತನಾದ ಮೇಲೆ, ಆಪಾದಿತನಾದ ಮೇಲೆ, ಬಂಧನದಲ್ಲಿರುವಾಗ ಆ ಮನುಷ್ಯ ಕೊಡುವಂಥ, ಒಂದು ಹೇಳಿಕೆಗೆ, ಒಬ್ಬ ಮುಖ್ಯಮಂತ್ರಿಯಾಗಿ ನಾಲ್ಕೂವರೆ ವರ್ಷ ಕೆಲಸ ನಿರ್ವಹಿಸಿದಂಥವರು ಅದಕ್ಕೆ ಉತ್ತರ ಕೊಡಬೇಕೆಂದು ಬಯಸುವುದೂ ಕೂಡ ಸಾಧುವಾದುದಲ್ಲ. ಅತ್ಯಂತ ಮುಖ್ಯವಾಗಿರತಕ್ಕಂಥ ಒಬ್ಬ ಘನವೆತ್ತ ವ್ಯಕ್ತಿ ಅಥವಾ ಸಂಬಂಧಪಟ್ಟಿರತಕ್ಕ ವಿಚಾರಗಳ ಬಗ್ಗೆ ಪ್ರಸ್ತಾಪ ಎತ್ತಿದಾಗ ಅದನ್ನು ಅಲ್ಲಗಳೆಯತಕ್ಕ ರೀತಿ, ಒಂದನ್ನು ತಾವು ಪರಿಪಾಲಿಸಬೇಕು. ಅಥವಾ ವಿಚಾರಣೆಗೆ ಒಳಪಟ್ಟಿರತಕ್ಕಂಥ ವ್ಯವಸ್ಥೆಯಲ್ಲಿ ಸಂಬಂಧಪಟ್ಟವರೆಲ್ಲರೂ ಕೂಡ ಹೇಳಿಕೆಯನ್ನು ಕೊಡಬಹುದು. ಇದು ವಿರೋಧ ಪಕ್ಷದ ನಾಯಕರಿಗೂ ಕೂಡ ಗೊತ್ತಿದೆ. ಈ ಹಣವನ್ನು ಕೊಟ್ಟಿದ್ದೇವೆ ಎನ್ನುವಂಥ ವಿಚಾರದಲ್ಲಿ, ಯಾರು ಯಾರು ಏನೆಲ್ಲಾ ಹೇಳಿಕೆಗಳನ್ನು ಕೊಟ್ಟಿದ್ದಾರೆ ಎನ್ನುವಂಥಾದ್ದು ತಾವು ನೋಡಬಹುದು. ಹಿಂದೆ ಒಂದು ಪುಸ್ತಕ ಬರೆದರು. "ರಾಜ್ ಎ ಪ್ರೈಸ್ ಕ್ಯಾಚ್"[1] ಎಂದು ಒಂದು ಪುಸ್ತಕ ಬಂತು. ಅದರಲ್ಲಿ ಕೊಟ್ಟಿರತಕ್ಕ ಹಣ ಯಾರಿಗೆ, ಯಾರು ಕಳುಹಿಸಿದರು, ಯಾರು ಹೋದರು, ಯಾರ ಹತ್ತಿರ ಅದು ಹೋಯಿತು ಎನ್ನುವಂಥ ವಿಚಾರ ಒಂದು ಕಡೆಗೆ ಇದೆ. ಈಗ ಸಂಗ್ರಾಮ್‌ಸಿಂಗ್ ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಆ ವಿವರಗಳು ಬೇರೆ ಬೇರೆ ಇವೆ. ಸತ್ಯಸಂಗತಿ ಒಂದೇ ಆಗಿದ್ದರೆ, ಅವರೆಡೂ ಕೂಡ, ಎಲ್ಲಾ ವಿಚಾರಗಳಲ್ಲಿಯೂ ಕೂಡ, ಎಲ್ಲಾ ವಿವರದಲ್ಲಿಯೂ ಕೂಡ, ಅದು ವ್ಯತ್ಯಾಸ ಆಗಿರಲಿಕ್ಕೆ ಸಾಧ್ಯವಾಗುವುದಿಲ್ಲ. ಪ್ರತಿಯೊಬ್ಬರೂ ಕೂಡ ಈ ತರಹದ ಅಭಿಪ್ರಾಯಗಳನ್ನು ನಿವೃತ್ತರಾದ ಮೇಲೆ ಕೊಟ್ಟಿರುವುದು ಕಂಡಾಗ, ಅವರ ದಕ್ಷತೆ ಮತ್ತು ಆ ವಿಚಾರಗಳ ಬಗ್ಗೆ ಅವರು ತೋರಿಸಿದಂಥ ಪ್ರಾಮಾಣಿಕತೆಯನ್ನು ನಾವು ಪ್ರಶ್ನೆ ಮಾಡಬೇಕಾಗುತ್ತದೆ. ಎರಡನೆಯದು, ಬಹಳ ಮುಖ್ಯವಾಗಿರತಕ್ಕಂಥಾದ್ದು, ಒಬ್ಬ ಅಧಿಕಾರಿ ತನ್ನ ಕರ್ತವ್ಯವನ್ನು ನಿರ್ವಹಣೆ ಮಾಡುವಾಗ, ತನ್ನ ನಿಯಮಾವಳಿಗಳಿಗೆ ಮತ್ತು ಅಲ್ಲಿರುವಂಥ ಕಾನೂನಿಗೆ ಅನುಗುಣವಾಗಿ ಆತ ನಡೆದುಕೊಳ್ಳಬೇಕೇ ವಿನ, ವ್ಯಕ್ತಿನಿಷ್ಠೆಯನ್ನು ವ್ಯಕ್ತಮಾಡತಕ್ಕಂಥಾದ್ದಾಗಲೇ, ಮೇಲಿನ ಅಧಿಕಾರಿಗಳು ಇದನ್ನು ಹೇಳಿದರು, ಆದ್ದರಿಂದ ನಾನು ಮಾಡಿದ್ದೇನೆ ಎನ್ನುವಂಥಾದ್ದಾಗಲೀ ಅದು ಆತ ತೆಗೆದುಕೊಳ್ಳತಕ್ಕಂಥ ಒಂದು ಸಂರಕ್ಷಣೆಯ ಕವಚ ಆಗುತ್ತದೆಯೇ ವಿನಹ, ಅದು ಸತ್ಯಸಂಗತಿ ಆಗುವುದಿಲ್ಲ. ಅವರು ಈ ಸಂದರ್ಭದಲ್ಲಿ ಹೇಳುವಾಗ ಮೇಲಧಿಕಾರಿಗಳಿಗೆ, ಇವತ್ತು ಯಾವ ತರಹದ ದಾರ್ಷ್ಟ್ಯತೆಯನ್ನು ಮತ್ತು ಎದೆಗಾರಿಕೆಯನ್ನು ನಾನು ತೋರಿಸಿದ್ದೇನೆಂದು ಆತ ಭ್ರಮಿಸಿದ್ದಾನೆ ಅವತ್ತು ಆ ಮಾತನ್ನೇ ಹೇಳಬಹುದಾಗಿತ್ತು. ಈ ತರಹದ ಕಾನೂನುಬಾಹಿರವಾದಂಥ ಚಟುವಟಿಕೆಗಳಿಗೆ ನಿರತರಾಗುವಂಥಾದ್ದು ನನ್ನ ಕರ್ತವ್ಯ ಅಲ್ಲ, ಆ ಕಾರಣಕ್ಕಾಗಿ ನಾನು ಇದರಲ್ಲಿ ಭಾಗಿಯಾಗುವುದಿಲ್ಲವೆಂಬ ಮಾತನ್ನು ಆತ ಹೇಳಿದ್ದರೆ, ಅದಕ್ಕೆ ತೂಕ ಬರುತ್ತಿತ್ತು. ಆ ಕಾನೂನುಬಾಹಿರವಾದಂಥ ಚಟುವಟಿಕೆಗಳಲ್ಲಿ ಆತ ಭಾಗಬಹಿಸಿ, ಮೌನವಹಿಸಿ ನಾಲ್ಕಾರು ವರ್ಷಗಳ ನಂತರ ಬಂಧಿತನಾದ ಸಂದರ್ಭಗಳಲ್ಲಿ ಕೊಡತಕ್ಕಂಥ ಹೇಳಿಕೆಗೆ ನಾವು ಎಷ್ಟು ತೂಕವನ್ನು ಕೊಡಬೇಕೆನ್ನುವುದನ್ನೂ ಕೂಡ ನಾವು ಪರೀಕ್ಷೆ ಮಾಡಬೇಕಾದ್ದದು ಇದೆ. ಅತ್ಯಂತ ಮುಖ್ಯವಾಗಿ ಈ ಸದನದಲ್ಲಿರತಕ್ಕ ಎಲ್ಲಾ ಹಿರಿಯರಿಗೆ ನಾನು ವಿನಯದಿಂದ ಪ್ರಾರ್ಥನೆ ಮಾಡಿಕೊಳ್ಳುವಂಥಾದ್ದು ಇಷ್ಟೆ, ರಾಜಕಾರಣಿಗಳು ಗಾಜಿನ ಮನೆಯಲ್ಲಿ ಕುಳಿತಿದ್ದೇವೆ ಎಂದು ನಾವೆಲ್ಲಾ ಅಂದುಕೊಂಡಿದ್ದೇವೆ. ಆದರೆ, ಗಾಜಿನ ಮನೆಯಲ್ಲಿ ಕೂತಿದ್ದೇವೆನ್ನುವ ಕಾರಣಕ್ಕಾಗಿಯೇ ಒಬ್ಬ ರಾಜಕಾರಣಿ ತನ್ನವಿಚಾರಗಳ ಬಗ್ಗೆ ಅಭಿಪ್ರಾಯ ವ್ಯಕ್ತಮಾಡಿದಾಗ ನಾವು ನಂಬದೆ, ಒಬ್ಬ

ಆಪಾದಿತನಾಗಿರತಕ್ಕಂಥ, ಒಬ್ಬ ಅಪರಾಧಿ ಕೊಟ್ಟ ಹೇಳಿಕೆಯನ್ನು ನಾವು ನಂಬುತ್ತೇವೆನ್ನುವುದಾಗಿದ್ದರೆ, ಅದು ಎಷ್ಟುಮಟ್ಟಿಗೆ ಗ್ರಾಹ್ಯ. ಅದು ಎಷ್ಟುಮಟ್ಟಿಗೆ ಈ ತರಹದಿಂದ ಪರಸ್ಪರ ನಾವು ಕೆಸರನ್ನು ಎರಚಾಡುವ ರೀತಿಯಲ್ಲಿ ಪ್ರಯತ್ನವನ್ನು ಮಾಡಿದರೆ ಸಾರ್ವಜನಿಕ ಜೀವನದಲ್ಲಿ ಬದುಕುವಂಥ ಯಾವುದೇ ಶಾಸಕ, ಸಂಸದ ಅಥವಾ ಮಂತ್ರಿ ಅಥವಾ ಬೇರೆ ಬೇರೆ ಸಾರ್ವಜನಿಕ ಪ್ರತಿನಿಧಿಗಳಾಗಿರತಕ್ಕಂಥವರ ಬಗ್ಗೆ ಜನಸಾಮಾನ್ಯರು ತಮ್ಮ ವಿಶ್ವಾಸವನ್ನು ಕಳೆದುಕೊಳ್ಳುತ್ತಾರೆ. ತನ್ಮೂಲಕವಾಗಿ ಪ್ರಜಾಪ್ರಭುತ್ವ ತನ್ನ ಇಡೀ ಅದರ ಜೀವದ್ರವ್ಯವನ್ನೇ ಕಳೆದುಕೊಳ್ಳುತ್ತದೆ. ಆ ಕಾರಣಕ್ಕಾಗಿಯೇ, ತಾವೇನು ಹೇಳಿದ್ದೀರಿ, ಇದು ಪತ್ರಿಕೆಯಲ್ಲಿ ಬರುತ್ತದೆ, ತಾವೂ ಕೂಡ ತಮ್ಮ ಗೆಳೆಯರು, ಅವರು ಕೂಡ ಹಿರಿಯರೇ. ನಿಮಗಿಂತಲೂ ಬಹಳ ಹಿರಿಯರಾಗಿ 1962 ರಲ್ಲೇ ಈ ಸದನವನ್ನು ಪ್ರವೇಶ ಮಾಡಿ ವಿವಿಧ ಹುದ್ದೆಗಳನ್ನು ಅಲಂಕರಿಸಿರತಕ್ಕಂಥ ಒಬ್ಬ ಮಾಜಿ ಮುಖ್ಯಮಂತ್ರಿ. ಆ ವಿಚಾರದಲ್ಲಿ ತಾವು ಖಾಸಗಿಯಾಗಿ ಮಾತನಾಡಬಹುದು. ಯಾರೋ ಒಬ್ಬ ವ್ಯಕ್ತಿ ನಿಯಮಾವಳಿಗಳ ಪ್ರಕಾರ ಮಾತನಾಡುವುದಾಗಿದ್ದರೆ, ನೀವು ಈ ಹೇಳಿಕೆಯನ್ನು ಕೊಟ್ಟೇ ತೀರಬೇಕೆನ್ನುವಂಥ ಒತ್ತಾಯವನ್ನು ಮಾಡತಕ್ಕಂಥ ಕಾರಣ ಇಲ್ಲ. ಆ ಕಾರಣಕ್ಕಾಗಿ ಪ್ರಾಯಶಃ ಅದನ್ನು ಇಲ್ಲಿಗೇ ಕೈಬಿಡತಕ್ಕಂಥಾದ್ದು ಒಳ್ಳೆಯದೆಂದು ಹೇಳುತ್ತೇನೆ.

ವಿಷಯ : ಸಂಗ್ರಾಮ್‌ಸಿಂಗ್ ಹೇಳಿಕೆ ಬಗ್ಗೆ ಚರ್ಚಿಸಲು ಅವಕಾಶ ನೀಡುವ ಬಗ್ಗೆ

ಶ್ರೀ ಬಿ.ಎಸ್. ಯಡಿಯೂರಪ್ಪ : ಈ ಪವಿತ್ರವಾದಂಥ ವಿರೋಧ ಪಕ್ಷದ ನಾಯಕನ ಸ್ಥಾನದಲ್ಲಿ ಅನೇಕ ಅತಿರಥ ಮಹಾರಥರು ತಮ್ಮ ಜೀವನ ಪೂರ್ತಿ ನಾವು ಪಾಠ ಕಲಿಯುವ ರೀತಿಯಲ್ಲಿ ತಮ್ಮ ಕೆಲಸವನ್ನು ನಿರ್ವಹಣೆ ಮಾಡಿದ್ದಾರೆ. ಇದು ಬಹಳ ಜವಾಬ್ದಾರಿ ಸ್ಥಾನ. ನಾನು ಏನೇ ಮಾತನಾಡಬೇಕಾದರು ಬಹಳ ಜವಾಬ್ದಾರಿಯಿಂದ ಮಾತನಾಡಬೇಕಾಗುತ್ತೆ. ಕೊರತೆ ಇದ್ದರೆ, ನಾವೆಲ್ಲಾ ಸರಿಪಡಿಸಿಕೊಂಡು ಹೋಗಬೇಕಾಗುತ್ತೆ. ನಾನು ಪರಿಪೂರ್ಣ ಎಂದು ಹೇಳುವುದಿಲ್ಲ. ಆದರೆ, ಪ್ರಶ್ನೆ ಏನೆಂದರೆ, ಆಶ್ಚರ್ಯಕರ ಸಂಗತಿ ಎಂದರೆ, ಐ.ಪಿ.ಸಿ.130ರ ಪ್ರಕಾರ r/w TADA ಯಾರಾದರೂ ಘೋಷಿತ ಅಪರಾಧಿಗೆ ಡೈರೆಕ್ಟ್‌ಲಿ ಇನ್‌ಡೈರೆಕ್ಟ್‌ಲಿ ರಕ್ಷಣೆ ಕೊಟ್ಟರೆ ಅದು ಅಕ್ಷಮ್ಯ ಅಪರಾಧ ಅಂತ ಹೇಳಿ ಈ ಐ.ಪಿ.ಸಿ. 130ರ ಪ್ರಕಾರ ಅವನು ಶಿಕ್ಷೆಗೆ ಅರ್ಹನಾಗುತ್ತಾನೆ. 10 ವರ್ಷಗಳ ಕಾಲ ಶಿಕ್ಷೆಗೆ ಅವಕಾಶವಾಗುತ್ತದೆ. ಸೆಷನ್ಸ್ ಕೋರ್ಟ್‌ನಲ್ಲಿ ಅವನ ಬಗ್ಗೆ ತನಿಖೆಯಾಗುತ್ತದೆ. ಇದು ನಂಬರ್ ಒನ್. ಎರಡನೆಯದು ನಾವೆಲ್ಲಾಗಮನಿಸಬೇಕಾದ ಒಂದು ಅಂಶ ಅಂದರೆ ಯಾವುದೇ ಒಬ್ಬ ಅಧಿಕಾರಿ ಕೆಲಸ ಮಾಡುವಂತಹ ಕಾಲದಲ್ಲಿ ಅತ್ಯಂತ ಪ್ರಾಮಾಣಿಕವಾಗಿ ಕೆಲಸ ಮಾಡಿದಾಗ ಬೆನ್ನು ತಟ್ಟಿ ಅವನಿಗೆ ಪ್ರಮೋಷನ್ ಕೊಟ್ಟು, ಯಾವುದೋ ಒಂದು ಕಪಿಮುಷ್ಟಿಗೆ ಸಿಕ್ಕಿ ಏನೋ ಸರ್ಕಾರ ಹೇಳುತ್ತಿದೆ ಅಂತ ಅವನ ಜವಾಬ್ದಾರಿಯನ್ನು ಮರೆತು ಇದು ಅಪರಾಧ ಎಂದು ಗೊತ್ತಿದ್ದರೂ ಮಾಡಿದಾಗ ಅವನ ರಕ್ಷಣೆಗಾದರೂ ಬರಬೇಕು ಸತ್ಯವನ್ನು ಬಯಲು ಮಾಡಬೇಕು. ಒಂದು ಆಶ್ಚರ್ಯಕರವಾದ ಸಂಗತಿ, ಇದು ಎಲ್ಲರಿಗೂ ಗೊತ್ತಿರುವಂತಾದ್ದು, ಸಂಗ್ರಾಮ್‌ಸಿಂಗ್ ಇಂಟಲಿಜನ್ಸ್ ಡಿ.ವೈ.ಎಸ್.ಪಿ. ಆಗಿದ್ದರು. ಅವನು ಈ ವಾಹನದ ಜೊತೆ ಮತ್ತು ದುಡ್ಡು ತೆಗೆದು ಕೊಂಡು ಹೋಗುವವರ ಜೊತೆ ಹೋಗುವ ಸಂದರ್ಭವೇ ಬರಲಿಲ್ಲ. ಮತ್ತು ನಿಮಗೆ ಗೊತ್ತಿರುವ ಹಾಗೆ ಯಾರು ಇಂಟಲ್‌ಜನ್ಸ್‌ನಲ್ಲಿ ಇರುತ್ತಾರೆ ಅವರ ಹತ್ತಿರ ಯಾವುದೇ ಆರಮ್ಸ್ ಇರುವುದಿಲ್ಲ. ಶಸ್ತ್ರಾಸ್ತ್ರ ಇರುವುದಿಲ್ಲ. ಆಶ್ಚರ್ಯಕರವಾದ ಸಂಗತಿ ಅಂದರೆ ಮಾನ್ಯ ಅಧ್ಯಕ್ಷರೆ, ಇವನು ಹೋಗುವಂತಹ ಸಂದರ್ಭದಲ್ಲಿ ಡಿವೈ.ಎಸ್.ಪಿ. ಈ ಸಿಟಿ ಆರಮ್ಡ್ ರಿಜರ್ವ್ ಇದೆಯಲ್ಲಾ ಅರ್ಮರಿ ಅಂತ ಅಲ್ಲಿಂದ